**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ. 2389/2023</u>**

**<u>ಫಿರ್ಯಾದುದಾರರು</u>** : ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**<u>ಆರೋಪಿತರು</u>** : ಎ 1. ಗೋವಿಂದಪ್ಪ ಬಿನ್ ಲೇಟ್ ವೆಂಕಟಪ್ಪ,
ವಯಾಃ 40 ವರ್ಷ,
ಎ 2. ಕವಿತಮ್ಮ @ ಕವಿತ
ಕೋಂ ಗೋವಿಂದಪ್ಪ,
ವಯಾಃ 38 ವರ್ಷ,
ಎ 3. ಬೋಶಮ್ಮ ಕೋಂ ಲೇಟ್ ವೆಂಕಟಪ್ಪ,
ವಯಾಃ 60 ವರ್ಷ,

ಆರೋಪಿ 1 ರಿಂದ 3 ರವರ
ವಾಸಃ ಸೀಕಲ್ ಗ್ರಾಮ,
ಚಿಂತಾಮಣಿ ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

: **<u>ದೋಷಾರೋಪಣೆ</u>** :

**ಶ್ರೀಮತಿ.ಹರ್ಷಿತ, ಬಿ.ಎ., ಎಲ್‌ಎಲ್.ಬಿ.,** ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ., ಆದ ನಾನು ಈ ಮೂಲಕ ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 04-04-2023 ರಾತ್ರಿ ಸುಮಾರು 09.00 ರ ಸಮಯದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಸೀಕಲ್ ಗ್ರಾಮದಲ್ಲಿ ಗ್ರಾಮದ ಚಾಸಾ-1 ರವರು 1 ನೇ ಆರೋಪಿಯನ್ನು ಕುರಿತು ನಮ್ಮ ಖಾಲಿ ನಿವೇಶನದಲ್ಲಿದ್ದ ಕಟ್ಟಿಗೆಗಳನ್ನು ಎತ್ತಿ ಹಾಕಿದ್ದು ಏಕೆ ಎಂದು ಕೇಳಿದ್ದಕ್ಕೆ 1 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಕುರಿತು ನೀನು ಯಾರೇ ಕೇಳುವುದಕ್ಕೆ ಬೋಳಿ ಮುಂಡೆ ಈ ಜಾಗ ನಮ್ಮದು ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ **ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಎರಡನೇಯದಾಗಿ,** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ–1 ರವರ ಬೆನ್ನಿಗೆ ಕೈಗಳಿಂದ ಗುದ್ದಿ ನೋವುಂಟು ಮಾಡಿದ್ದು, 2 ನೇ ಆರೋಪಿಯಾದ ನೀವು ಚಾಸಾ–1 ರವರ ಮೈಮೇಲೆ ಕೈಗಳಿಂದ ಗುದ್ದಿದ್ದು, 3 ನೇ ಆರೋಪಿಯಾದ ನೀವು ಚಾಸಾ–1 ರವರ ಬೆನ್ನಿಗೆ ಮೇಲೆ ಕೈಗಳಿಂದ ಹೊಡೆದು ನೋವುಂಟು ಮಾಡಿರುತ್ತೀರಿ, ಆ ಮೂಲಕ **ಭಾ.ದಂ.ಸಂ. ಕಲಂ 323 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಮೂರನೇಯದಾಗಿ,** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಅಲ್ಲಿಯೇ ಬಿದ್ದಿದ್ದ ಕೋಲಿನಿಂದ ಚಾಸಾ–1 ರವರ ಬೆನ್ನಿಗೆ ಹೊಡೆದು ಮೂಗೇಟುಂಟು ಮಾಡಿರುತ್ತೀರಿ, ಆ ಮೂಲಕ **ಭಾ.ದಂ.ಸಂ.ಕಲಂ 324 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಕೊನೇಯದಾಗಿ,** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ, ಆರೋಪಿತರಾದ ನೀವುಗಳು ಚಾಸಾ–1 ರವರನ್ನು ಕುರಿತು ಈ ಸೈಟಿನ ವಿಚಾರಕ್ಕೆ ಬಂದರೆ ನಿನ್ನನ್ನು ಸಾಯಿಸುತ್ತೇನೆಂದು ಪ್ರಾಣಬೆದರಿಕೆ ಹಾಕಿರುತ್ತೀರಿ, ಆ ಮೂಲಕ **ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

ಸದರಿ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿಗಳ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.**
**ದಿನಾಂಕಃ**15.04.2026

**ಸಹಿ/–**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚಿಂತಾಮಣಿ.**

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ. 2389/2023</u>**

**<u>ಫಿರ್ಯಾದುದಾರರು:</u>** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**<u>ಆರೋಪಿಃ</u>** ಎ 1. ಗೋವಿಂದಪ್ಪ ಬಿನ್ ಲೇಟ್ ವೆಂಕಟಪ್ಪ,

1. ನೀವು ಮೇಲೆ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/-**

**ದಿನಾಂಕಃ** 15.04.2026 **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

**ಆರೋಪಿ ಸಹಿಃ**

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ. 2389/2023</u>**

**<u>ಫಿರ್ಯಾದುದಾರರುಃ</u>** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**<u>ಆರೋಪಿಃ</u>** ಎ2. ಕವಿತಮ್ಮ @ ಕವಿತ

ಕೋಂ ಗೋವಿಂದಪ್ಪ,

1. ನೀವು ಮೇಲಿ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/-**

**ದಿನಾಂಕಃ 15.04.2026** **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

**ಆರೋಪಿ ಸಹಿಃ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ.2389/2023**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**ಆರೋಪಿಃ** ಎ3. **ಬೋಶಮ್ಮ ಕೋಂ ಲೇಟ್ ವೆಂಕಟಪ್ಪ,**

1. ನೀವು ಮೇಲಿ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/-**

**ದಿನಾಂಕಃ** 15.04.2026 **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

**ಆರೋಪಿ ಸಹಿಃ**